# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮೂಡಲಗಿ.

ಸಿ.ಸಿ. ನಂಃ **475/2014**

ಸಿ.ಡಬ್ಲ್ಯೂ- 6
ಪಿ.ಡಬ್ಲ್ಯೂ- 6

**ದಿನಾಂಕಃ 07-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಪ್ರಭಾಕರ ತಾಮನಕರ |
| ತಂದೆಯ/ಗಂಡನ ಹೆಸರು | : ದೊಂಡೋಪಂತ |
| ವಯಸ್ಸು | : 83 ವರ್ಷ |
| ಉದ್ಯೋಗ | : ಖಾಸಗಿ ಉದ್ಯೋಗ |
| ವಾಸ ಸ್ಥಳ | : ಧಾರವಾಡ |
| ತಾಲೂಕು | : ಧಾರವಾಡ |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದ:-**

ಚಾಸಾ 1 ನನ್ನ ಅಳಿಯ, ಚಾಸಾ 5 ನನ್ನ ಅಳಿಯನ ಪತ್ನಿ. ನಾನು 1980 ರಿಂದ ಇಲ್ಲಿಯವರೆಗೂ ಕೇಳಕರ ಪ್ರೌಢ ಶಾಲೆಯ ಕಾರ್ಯದರ್ಶಿ ಆಗಿ ಕರ್ತವ್ಯ ನಿರ್ವಹಿಸುತ್ತೇನೆ. ಮಾನ್ಯ ನ್ಯಾ ದ ಮುಂದಿರುವ ಆರೋಪಿ ನನಗೆ ಪರಿಚಯವಿದ್ದು, ಆತ ಕೇಳಕರ ಪ್ರೌಢ ಶಾಲೆಯಲ್ಲಿ ಮುಖ್ಯ ಉಪಾದ್ಯಾಯರಾಗಿ ಕೆಲಸ ಮಾಡಿರುತ್ತಾರೆ. ಬಲಭೀಮ ವಿದ್ಯಾ ಪ್ರಸಾರಕ ಸಮಿತಿ ಕುಲಗೋಡ ಕೇಳಕರ ಅವರಿಗೆ ಸೇರಿದ ಸಮಿತಿಯಾಗಿದ್ದು, ಸದರಿ ಸಂಸ್ಥೆಯ ಅಡಿಯಲ್ಲಿ ಕೇಳಕರ ಪ್ರೌಢ ಶಾಲೆ ಸ್ಥಾಪನೆಯಾಗಿತ್ತು.

2003 ರಲ್ಲಿ ಆರೋಪಿ ನಮ್ಮ ಶಾಲೆಯ ಮುಖ್ಯ ಉಪಾದ್ಯಾಯರಾಗಿದ್ದು, 2003 ರಿಂದ ಆರೋಪಿ ನಮ್ಮ ಶಾಲೆಯ ಮಕ್ಕಳ fees ಹಣವನ್ನು ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ 2010 ರಲ್ಲಿ ಸಂಸ್ಥೆಯ ಆಡಿಟ್ ನ್ನು ವಿಜಯ ಪಂಚಪ್ಪ ಅವರ ಕಡೆಯಿಂದ ಮಾಡಿಸಿದಾಗ ತಿಳಿದುಬಂದಿರುತ್ತದೆ. ಈ ಬಗ್ಗೆ ಚಾಸಾ 1 ಮತ್ತು 5 ರವರು ಆರೋಪಿಯ ವಿರುದ್ಧ ಕುಲಗೋಡ ಪೋಲೀಸ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ. ಆರೋಪಿ 2003 ರಿಂದ 2011 ರ ವರೆಗಿನ ಒಟ್ಟು ಹಣ 1,72,900/- ಹಣ ದುರುಪಯೋಗಪಡಿಸಿಕೊಂಡಿರುತ್ತಾನೆ. ದೂರು ದಾಖಲಿಸಿದ ನಂತರ ಒಟ್ಟು ಮೂರು ಸಲ ಆರೋಪಿ 23,000/- ಒಂದು ಸಲ, 10,000/- ರೂ. ಮತ್ತೊಂದು ಸಲ ಮತ್ತು ಮೂರನೇ ಸಲ 6,000/- ರೂ. ಹಣವನ್ನು ವಾಪಾಸ ನೀಡಿರುತ್ತಾನೆ. 1,33,200/- (something) ಹಣ ಆರೋಪಿಯಿಂದ ದುರುಪಯೋಗವಾಗಿರುತ್ತದೆ. ಈ ಬಗ್ಗೆ ನಾನು ತನಿಖಾಧಿರಿಗೆ ಹೇಳಿಕೆ ನೀಡಿರುತ್ತೇನೆ.

**(ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಸಾಕ್ಷಿಯು ನ್ಯಾಯಾಲಯದಲ್ಲಿ ನೀಡಿದ ಹೇಳಿಕೆ**

ಸಿ.ಸಿ. ನಂಃ 475/2014
ಸಿ.ಡಬ್ಲ್ಯೂ- 6
ಪಿ.ಡಬ್ಲ್ಯೂ- 6

**ಮತ್ತು ಪೊಲೀಸರ ಮುಂದೆ ನೀಡಿದ ಹೇಳಿಕೆಯನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ನೀಡಲಾಯಿತು)**

**ಪಾಟೀ ಸವಾಲುಃ ಎ.ಪಿ.ಪಿ ರವರಿಂದ:-**

ಆರೋಪಿ ವೆಂಕಪ್ಪ ಉದ್ದಪ್ಪ ರಡೇರಹಟ್ಟಿ ನಮ್ಮ ಶಾಲೆಯ ಮುಖ್ಯ ಉಪಾದ್ಯಾಯರು ಆಗಿದ್ದರು ಎಂದರೆ ಸರಿ. 2008-09 ರವರೆಗೆ ಲೆಕ್ಕ ಪರಿಶೋಧನೆ ಮಾಡಿಸಿರುವುದಿಲ್ಲ ಎಂದು ಆರೋಪಿಗೆ ಈ ಬಗ್ಗೆ ಚಾಸಾ 1 ರವರು ಪತ್ರ ವ್ಯವಹಾರ ಮಾಡಿರುತ್ತಾರೆ ಎಂದರೆ ಸರಿ. ಆರೋಪಿ ಪಿ.ಜಿ. ಗಾಳಿ ಬೆಳಗಾವಿ ಇವರ ಕಡೆಯಿಂದ ಲೆಕ್ಕ ಪರಿಶೋಧನೆ ಮಾಡಿಸಿರುವುದಾಗಿ ಪತ್ರಕ್ಕೆ ಉತ್ತರ ನೀಡಿರುತ್ತಾರೆ ಎಂದರೆ ಸರಿ. ವಿಜಯ ಪಂಚಪ್ಪ ಅವರಿಂದ ಆಡಿಟ್ ಮಾಡಿಸಿದ ನಂತರ 1,72,901/- ರೂ. ಹಣವನ್ನು ಆರೋಪಿ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ನನಗೆ ತಿಳಿದಿರುತ್ತದೆ ಎಂದರೆ ಸರಿ. ಹಣ ದುರ್ಬಳಕೆ ಬಗ್ಗೆ ನಮಗೆ ತಿಳಿದ ನಂತರ ಆತನನ್ನು ದಿಃ 30-06-2011 ರಂದು ಅಮಾನತ್ತಿನಲ್ಲಿ ಇಟ್ಟಿರುತ್ತೇವೆಂದರೆ ಸರಿ. 2003-04 ರಿಂದ 2009 ರವೆರೆಗೆ ಆರೋಪಿ ರೂ.1,72,901.06/- ಹಣ ದುರ್ಬಳಕೆ ಮಾಡಿಕೊಂಡಿದ್ದಾರೆಂದು ನಾನು ತನಿಖಾಧಿಕಾರಿಗೆ ಹೇಳಿರುತ್ತೇನೆಂದರೆ ಸರಿ. ದಿಃ 22-04-2012 ರಂದು ನಾನು ತನಿಖಾಧಿಕಾರಿಗೆ ರೂ.10,270/- ಗಳನ್ನು ಡಿ ಸಿ ಸಿ ಬ್ಯಾಂಕ ಕುಲಗೋಡಿನಲ್ಲಿ ಜಮಾ ಮಾಡಿದ್ದು, ರೂ.6,060/- ಗಳನ್ನು ಖಜಾನೆಗೆ ತುಂಬಿದ್ದು ಉಳಿದ ರೂ. 1,56,571/- ಗಳನ್ನು ದುರ್ಬಳಕೆ ಮಾಡಿಕೊಂಡಿದ್ದಾರೆಂದು ಹೇಳಿಕೆ ನೀಡಿರುತ್ತೇನೆಂದರೆ ಸರಿ. ದಿಃ 25-05-2012 ರಂದು ಆರೋಪಿ ಎನ್ ಎಸ್ ಸಿ ಪ್ರಮಾಣ ಪತ್ರದ ದಾಖಲಾತಿಯ ಪ್ರಕಾರ ಆರೋಪಿಯು ರೂ.23,300/- ಗಳನ್ನು ಜಮಾ ಮಾಡಿದ್ದು, ರೂ.5,100/- ಗಳನ್ನು ತನ್ನ ಸ್ವಂತಕ್ಕೆ ಬಳಸಿಕೊಂಡಿದ್ದು ಒಟ್ಟು ರೂ. 1,33,271/- ಗಳನ್ನು ದುರ್ಬಳಕೆ ಮಾಡಿಕೊಂಡಿದ್ದಾರೆಂದು ಹೇಳಿಕೆ ನೀಡಿರುತ್ತೇನೆಂದರೆ ಸರಿ. ಆರೋಪಿ ಸಂಸ್ಥೆಯ ಹಣವನ್ನು ತನ್ನ ಸ್ವಂತಕ್ಕೆ ಬಳಸಿಕೊಂಡು ದುರ್ಬಳಕೆ ಮಾಡಿಕೊಂಡು ಸಂಸ್ಥೆಗೆ ಮೋಸ ಮಾಡಿರುತ್ತಾರೆಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ Sri.ACD ವಕೀಲರಿಂದಃ**

ದೂರು ನೀಡಲು ನಾನು ಠಾಣೆಗೆ ಹೋಗಿರುತ್ತೇನೆ. ಆ ಸಮಯದಲ್ಲಿ ನಾನು ನನ್ನ ವಯಸ್ಸನ್ನು 73 ಎಂದು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ನಾನು ನನ್ನ ಹೇಳಿಕೆಯಲ್ಲಿ ನನ್ನ ವಯಸ್ಸು 40 ಎಂದು

ಸಿ.ಸಿ. ನಂಃ 475/2014
ಸಿ.ಡಬ್ಲ್ಯೂ- 6
ಪಿ.ಡಬ್ಲ್ಯೂ- 6

ಬರೆಯಿಸಿರುತ್ತೇನೆ ಎಂದರೆ ಸರಿ. ನನ್ನ ವಯಸ್ಸನ್ನು ನಾನೇ ಹೇಳಿ ಬರೆಯಿಸಿರುವ ಬಗ್ಗೆ ಆಗಲಿ ಅಥವಾ ಪೋಲೀಸರು ಕೇಳಿರುವ ಬಗ್ಗೆ ನನಗೆ ನೆನಪಿರುವುದಿಲ್ಲ. ಈಗ ನಾನು zerox ಮತ್ತು typing shop ಇಟ್ಟುಕೊಂಡಿರುತ್ತೇನೆ. ನಾನು ನಡೆಸುತ್ತಿರುವ ಅಂಗಡಿಯ ಮಾಲೀಕರು ಚಾಸಾ 1 ಮತ್ತು 5 ಎಂದರೆ ಸರಿ. ಚಾಸಾ 1 ಮತ್ತು 5 ರವರು ಕೇಳಕರ ಪ್ರೌಢಶಾಲೆಯ ಚೇರಮನ್ ಮತ್ತು ವೈಸ್ ಚೇರಮನ್ ಎಂದರೆ ಸರಿ. ಈ ದಿನ ಮಾನ್ಯ ನ್ಯಾ ಕ್ಕೆ ಚಾಸಾ 1 ರವರ ಜೊತೆ ಬಂದಿರುತ್ತೇನೆ. ದೂರು ನೀಡಲು ನಾನು ಠಾಣೆಗೆ ಹೋಗಿರಲಿಲ್ಲ. ದೂರು ನೀಡಲು ಚಾಸಾ 1 ಮತ್ತು 5 ರವರು ಹೋಗಿರುತ್ತಾರೆ. ಪಂಚಪ್ಪ ಕಲಬುರಗಿಯವರು ನಮ್ಮ ಸಂಸ್ಥೆಯ ಆಡಿಟ್ ರಿಪೋರ್ಟನ್ನು 2010 ರಲ್ಲಿ ಕೊಟ್ಟಿರುತ್ತಾರೆ. ದೂರನ್ನು 2008 ರಲ್ಲಿ ದಾಖಲಿಸಿರುತ್ತೇವೆ. ದೂರನ್ನು 2011 ರಲ್ಲಿ ದಾಖಲು ಮಾಡಿರುತ್ತೇವೆ ಎಂದರೆ ಸರಿ.

ಸಾಮಾನ್ಯವಾಗಿ ಆಡಿಟ್ ಪ್ರತಿ ಹಣಕಾಸು ವರ್ಷಕ್ಕೆ ಮಾಡಿಸಬೇಕಾಗುತ್ತದೆ ಎಂದರೆ ಸರಿ. 2003 ರಿಂದ ದಿಃ 31-08-2008 ರವರೆಗೆ ಮಾತ್ರ ಏಕೆ ಆಡಿಟ್ ಮಾಡಿಸಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಉತ್ತರಿಸಿರುವುದಿಲ್ಲ. ದಿಃ 31-08-2008 ರಂದು ಆರೋಪಿಯನ್ನು ನಮ್ಮ ಶಾಲೆಯಿಂದ ಅಮಾನತ್ತುಪಡಿಸಿರುತ್ತೇವೆ ಎಂದರೆ ಸರಿ. 2003 ರಿಂದ 2008 ರವರೆಗಿನ ಯಾವ ದಿನಾಂಕಗಳಂದು ಆರೋಪಿ ಎಷ್ಟು ಹಣ ದುರುಪಯೋಗಪಡಿಸಿಕೊಂಡಿದ್ದಾನೆ ಎಂದು ಹೇಳಲಾಗುವುದಿಲ್ಲ. ಆಡಿಟ್ ರಿಪೋರ್ಟನ್ನು ನಾನು ಓದಿರುತ್ತೇನೆ. ನಾನು ಬಲಭೀಮ ವಿದ್ಯಾ ಪ್ರಸಾರಕ ಸಮಿತಿ ಕುಲಗೋಡ ಇದರ ಕಾರ್ಯದರ್ಶಿ ಎಂದರೆ ಸರಿ. ನಮ್ಮ ವಿದ್ಯಾ ಪ್ರಸಾರಕ ಸಮಿತಿಯ MOA 24 ನೇ ಪ್ರಾವಿಜನ್ ಪ್ರಕಾರ ಸಮಿತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯ ಹೆಸರಿನಲ್ಲಿ ಸಮಿತಿಯ ಬ್ಯಾಂಕ್ ಅಕೌಂಟನ್ನು ಓಪನ್ ಮಾಡಬೇಕು ಎಂದರೆ ಸರಿ. MOA ಪ್ರಕಾರ ನಾನು ಅಧ್ಯಕ್ಷರು ಮತ್ತು ಕಾರ್ಯದರ್ಶಿ ಹೆಸರಿನಲ್ಲಿ ಬ್ಯಾಂಕ್ ಅಕೌಂಟನ್ನು ಓಪನ್ ಮಾಡಿರುವುದಿಲ್ಲ ಎಂದರೆ ಸರಿ. ನಮ್ಮ ವಿದ್ಯಾ ಪ್ರಸಾರಕ ಸಮಿತಿಯ MOA 25(ಸಿ) ನೇ ಪ್ರಾವಿಜನ್ ಪ್ರಕಾರ ಸಮಿತಿಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಮತ್ತು property ಗಳನ್ನು ಕಾರ್ಯದರ್ಶಿಯ ಕಬ್ಜೆಯಲ್ಲಿ ಇರಬೇಕು ಎಂದರೆ ಸರಿ. 1980 ರಿಂದ 2011 ರವರೆಗೆ ಸಂಸ್ಥೆಯಲ್ಲಿ ಆದ ಹಣಕಾಸಿನ ಅವ್ಯವಹಾರದ ಬಗ್ಗೆ ನನಗೆ ಏಕೆ ಗಮನಕ್ಕೆ ಬರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಎಲ್ಲಾ ದಾಖಲಾತಿಗಳು ಚೇರಮನ್ custody ಯಲ್ಲಿ ಇದ್ದವು ಎಂದು ನುಡಿಯುತ್ತಾರೆ. ನಮ್ಮ ಸಂಸ್ಥೆಯ MOA ಪ್ರಕಾರ ನಾವು ಆಡಳಿತ ವ್ಯವಹಾರ ಮಾಡಿರುವುದಿಲ್ಲ ಎಂದರೆ ನನಗೆ ಮಾಹಿತಿ ಇರುವುದಿಲ್ಲ, ಈ ಬಗ್ಗೆ ಚೇರಮನ್ ಗೆ ಮಾಹಿತಿ ಇರುತ್ತದೆ.

ಸಿ.ಸಿ. ನಂಃ 475/2014

ಸಿ.ಡಬ್ಲ್ಯೂ- 6
ಪಿ.ಡಬ್ಲ್ಯೂ- 6

ಚಾಸಾ 10 ನನಗೆ ಪರಿಚಯವಿರುತ್ತಾರೆ. ಪ್ರಕರಣದ ಆರೋಪಿ ಮತ್ತು ಚಾಸಾ 10 ಏಕಕಾಲದಲ್ಲಿ ನಮ್ಮ ಶಾಲೆಯಲ್ಲಿ ಶಿಕ್ಷಕರಾಗಿ ನೇಮಕಗೊಂಡಿದ್ದರು ಎಂದರೆ ಸರಿ. ಚಾಸಾ 1 ರವರಿಗೆ ಚಾಸಾ 10 ರವರ ಬಗ್ಗೆ ಒಳ್ಳೆಯ ಅಭಿಪ್ರಾಯ ಮತ್ತು ಸ್ನೇಹ ಇತ್ತು ಎಂದರೆ ಸರಿಯಲ್ಲ. ಆರೋಪಿ ಸೇವೆಯಲ್ಲಿ ಹಿರಿಯತನ ಹೊಂದಿದ್ದರೂ ಆರೋಪಿಯನ್ನು ಬಿಟ್ಟು ಚಾಸಾ 10 ರವರವನ್ನು ಕೇಳಕರ ಪ್ರೌಢಶಾಲೆಯ HM ಮಾಡಿದ್ದರಿಂದ ಆರೋಪಿ KAT ಗೆ ಅರ್ಜಿ ಸಲ್ಲಿಸಿ ಅದನ್ನು ರದ್ದುಪಡಿಸಿಕೊಂಡು ನಮ್ಮ ಶಾಲೆಯ HM ಆಗಿ ನೇಮಕಗೊಂಡಿದ್ದರು ಎಂದರೆ ಸರಿ. ನಾನು ಮತ್ತು ಚಾಸಾ 10 ರವರು ಸೇರಿಕೊಂಡು ಕೇಳಕರ ಪ್ರೌಢಶಾಲೆಯ ಹಣ ದುರುಪಯೋಗಪಡಿಸಿಕೊಂಡು ಆರೋಪಿಯ ಮೇಲೆ ಸುಳ್ಳು ಆರೋಪಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಆರೋಪಿ ಪಿ.ಜಿ. ಗಾಳಿಯವರಿಂದ ಕೇಳಕರ ಪ್ರೌಢಶಾಲೆಯ 2002-03 ರಿಂದ 2006-07 ರವರೆಗೆ ಆಡಿಟ್ ಮಾಡಿಸಿರುತ್ತಾರೆ ಎಂದರೆ ಸರಿ. ಸದರಿ ಆಡಿಟ್ ನಲ್ಲಿ ಹಣ ದುರುಪಯೋಗದ ಬಗ್ಗೆ ಕಂಡುಬಂದಿರುವುದಿಲ್ಲ ಎಂದರೆ ಪಿ.ಜಿ. ಗಾಳಿ ನಮ್ಮ ಕೇಳಕರ ಶಾಲೆಯ ಆಡಿಟರ್ ಆಗಿರುವುದಿಲ್ಲ. ನಾನು ಮತ್ತು ಚಾಸಾ 1 ರವರು ಸೇರಿಕೊಂಡು ಆರೋಪಿಯನ್ನು ನಮ್ಮ ಶಾಲೆಯಿಂದ ವಜಾ ಮಾಡಿದರೆ ಚಾಸಾ 10 ರವರನ್ನು ಶಾಲೆಯ HM ಆಗಿ ಮಾಡಬಹುದೆಂಬ ಉದ್ದೇಶದಿಂದ ಪ್ರಸ್ತುತ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಚಾಸಾ 1 ಮತ್ತು 5 ರವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ ದಂ.,
ಮೂಡಲಗಿ.